# ಪ್ರಕಟಣೆಗಾಗಿ

ಚಿತ್ರದುರ್ಗ ಏ.1 - ನಗರದ ಆಶಾಕಿರಣ ಸಂಸ್ಥೆಯು ಬಸವೇಶ್ವರ ಆಸ್ಪತ್ರೆಯಲ್ಲಿ ಕೊರೊನಾ ಪೀಡಿತ ರೋಗಿಗಳ ಚಿಕಿತ್ಸಾ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ವೈದ್ಯರು ಮತ್ತು ಶುಶ್ರೂಷಕ ಸಿಬ್ಬಂದಿಗೆ 2.50ಲಕ್ಷ ರೂ.ಗಳ ಮೊತ್ತದ ಕೊರೊನಾ ಸೋಂಕಿತರಿಗೆ ಚಿಕಿತ್ಸೆ ನೀಡುವ ಸಂದರ್ಭದಲ್ಲಿ ಬಳಸಲಾಗುವ ವೈಯುಕ್ತಿಕ ಸಂರಕ್ಷಣಾ ಸಾಧನಗಳು ಮತ್ತು ಮುಖ ಗವಜುಗಳನ್ನು ಒದಗಿಸುವ ಮೂಲಕ ಮಾನವೀಯ ಕಾಳಜಿಯನ್ನು ಮೆರೆದಿದ್ದಾರೆ.

ಈ ಸಂದರ್ಭದಲ್ಲಿ ಆಶಾಕಿರಣ ಸಂಸ್ಥೆಯ ಕಾರ್ಯಕಾರಿ ಮಂಡಳಿ ಸದಸ್ಯರಾದ ಕೇಶವಮೂರ್ತಿ ಕೆ.ವಿ., ದಿವಾಕರ್ ಎಂ.ವಿ., ಗಿರೀಶ್ ಎಸ್.ಎನ್., ಮಹೇಶ್, ಕೆ. ಹಿಮ್ಮತ್ ಕೇದಾರ್, ಸಿದ್ಧರಾಮೇಶ್ವರ ಕೆ.ಆರ್. ಹಾಗು ನಿರ್ದೇಶಕರಾದ ಮಧುಪ್ರಸಾದ್ ಕೆ., ರವಿಶಂಕರ್ ಜಿ.ಕೆ., ಪ್ರವೀಣ್‌ಕುಮಾರ್ ಎಂ., ಪ್ರಸನ್ನಕುಮಾರ್, ರಮೇಶ್ ಎನ್., ಭಾನು ಕಿರಣ್, ನಾಗರಾಜ್ ಸಿ.ಜೆ. ಮತ್ತು ಬಸವೇಶ್ವರ ವೈದ್ಯಕೀಯ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ|| ಪ್ರಶಾಂತ್, ವೈದ್ಯಕೀಯ ಅಧೀಕ್ಷಕ ಡಾ|| ಪಾಲಾಕ್ಷಯ್ಯ, ಡಾ|| ನಾರಾಯಣಮೂರ್ತಿ ಮತ್ತು ಡಾ|| ಸುಧಾ ಮುಂತಾದವರಿದ್ದರು.





